1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 39/2021

ದಿನಾಂಕ ಃ 11.12.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಬಿ ಆರ್ ವಿ ವಕೀಲರಿಂದಃ

12. ಫ್ರಾಸಾ.1 ರವರು ನಮ್ಮ ಪೊಲೀಸ್ ಠಾಣೆಗೆ ದೂರು ನೀಡಲು ಎಲ್ಲಿಂದ ಬಂದರೆಂದು ನನಗೆ ಗೊತ್ತಿಲ್ಲ. ದೂರು ನೀಡುವ ಸಮಯದಲ್ಲಿ ಫ್ರಾಸಾ.1 ರವರಿಗೆ ಗಾಯಗಳಾಗಿದ್ದುದನ್ನು ನಾನು ಗಮನಿಸಿದ್ದೇನೆ. ಸದರಿ ಸಮಯದಲ್ಲಿ ಫ್ರಾಸಾ.1 ರವರಿಗೆ ಪ್ರಥಮ ಚಿಕಿತ್ಸೆ ಆಗಿತ್ತು. ಪ್ರಥಮ ಚಿಕಿತ್ಸೆಯ ದಾಖಲಾತಿಯನ್ನು ಫ್ರಾಸಾ.1 ರವರು ದೂರಿನ ಜೊತೆ ನೀಡಿಲ್ಲ. ಫ್ರಾಸಾ.1 ರವರು ಆ ದಿನ ಪೊಲೀಸ್ ಠಾಣೆಯಲ್ಲಿ ಬೆಳಗ್ಗೆ 11.45 ರ ತನಕ ಇದ್ದರು. ಸದರಿ ದೂರನ್ನು ಫ್ರಾಸಾ.1 ರವರು ತಯಾರು ಮಾಡಿರಬಹುದು,ಕಾರಣ ಅವರು ವಿದ್ಯಾವಂತರಿರುತ್ತಾರೆ. ಈ ಪ್ರಕರಣದ ದೂರು ನೀಡುವ ಮೊದಲು ಆಸ್ಪತ್ರೆಯಿಂದ ಮಾಹಿತಿ ಬಂದಿತ್ತು. ಮಾಹಿತಿ ಬರುವ ಸಮಯದಲ್ಲಿ ನಾನು ವಿಶ್ರಾಂತಿಗೆ ಹೋಗಿದ್ದೆನು, ನಂತರ ವಾಪಸ್ ಪೊಲೀಸ್ ಠಾಣೆಗೆ ಬಂದಾಗ ಫ್ರಾಸಾ.21 ರವರ ಮೌಖಿಕ ಆದೇಶದ ಮೇರೆಗೆ ಪ್ರಥಮ ವರ್ತಮಾನ ವರದಿಯನ್ನು ದಾಖಲು ಮಾಡಿರುತ್ತೇನೆ. ಸದರಿ ಮಾಹಿತಿಯ ಬಗ್ಗೆ ಪ್ರಥಮ ವರ್ತಮಾನ ವರದಿ ದಾಖಲಾಗುವ ಮೊದಲು ನಾನು ಪರಿಶೀಲಿಸಿಲ್ಲ. ಆಸ್ಪತ್ರೆಯ ಮಾಹಿತಿಯ ಆಧಾರದ ಮೇರಗೆ ಆಸ್ಪತ್ರೆಗೆ ಹೋಗಿ ವಿಚಾರಿಸಿಲ್ಲ ಎಂದರೆ ಪ್ರಥಮ ವರ್ತಮಾನ ವರದಿ ದಾಖಲು ಮಾಡುವ ಮೊದಲು ಆಸ್ಪತ್ರೆಗೆ ಹೋಗಿ ವಿಚಾರಿಸಿಲ್ಲ ಎಂದು ಸಾಕ್ಷಿಯು ನುಡಿಯುತ್ತಾರೆ.

13. ನಮ್ಮ ಪೊಲೀಸ್ ಠಾಣೆಯಿಂದ ಮರೀಗೌಡ ಬಡಾವಣೆಯು ಸುಮಾರು1 ಕಿಮೀ ದೂರದಲ್ಲಿ ಇದೆ. ಮಂಡ್ಯ ಸರ್ಕಾರಿ ಆಸ್ಪತ್ರೆಯಿಂದ ನಮ್ಮ ಪೊಲೀಸ್ ಠಾಣೆಯು ಸುಮರು 1 ರಿಂದ 1 ವರೆ ಕಿಮೀ ದೂರದಲ್ಲಿದೆ. ನಿಪಿ.1 ರಲ್ಲಿನ 3 ನೇ ಪುಟದಲ್ಲಿ ಇರುವ ಕೊನೆಯ 3 ಸಾಲುಗಳಿಗೂ ಹಾಗೂ ಅದರಲ್ಲಿ ಇರುವ ಇತರೆ ಬರವಣಿಗೆಗಳಿಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು, ಸದರಿ 3 ನೇ ಪುಟದಲ್ಲಿ ಇರುವ ಕೊನೆಯ 3 ಸಾಲುಗಳನ್ನು ಸಣ್ಣದಾಗಿ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಸದರಿ ನಿಪಿ.1 ರಲ್ಲಿ ಫ್ರಾಸಾ.1 ರವರು ಕಾನೂನು ಕ್ರಮಜರುಗಿಸಬೇಕು ಎಂದು ಕೋರಿದ ನಂತರದ 3 ಸಾಲುಗಳನ್ನು ಫ್ರಾಸಾ.1 ರವರು ನನ್ನ ಜೊತೆ ಶರೀಕಾಗಿ ನಂತರದಲ್ಲಿ ಸೇರಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.1 ಸುಳ್ಳು ದೂರಿನ

ಆಧಾರದ ಮೇರೆಗೆ ನಾನು ಯಾವುದೇ ಪರಿಶೀಲನೆ ಮಾಡದೇ ಸುಳ್ಳು ಪ್ರಥಮ ವರ್ತಮಾನ ವರದಿಯನ್ನು ತಯಾರು ಮಾಡಿದ್ದೇನೆ ಎಂದರೆ ಸರಿಯಲ್ಲ.

14. 4 ಮತ್ತು 6 ನೇ ಆರೋಪಿತರನ್ನು ಶನಿಮಹಾತ್ಮ ದೇವಸ್ಥಾನದ ಬಳಿ ಪತ್ತೆ ಮಾಡುವ ಸಲುವಾಗಿ ಅವರ ಚಹರೆಗಳ ಬಗ್ಗೆ ಮಾಹಿತಿ ಇತ್ತೆ ಎಂದರೆ ಸಾಕ್ಷಿಯು, ತನಗೆ ಖಚಿತ ಮಾಹಿತಿ ಬಂದ ಮೇರೆಗೆ ಸದರಿ ಶನಿಮಹಾತ್ಮ ದೇವಸ್ಥಾನದ ಬಳಿ ಹೋಗಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಶನಿಮಹಾತ್ಮ ದೇವಸ್ಥಾನವು, ಮಂಡ್ಯ-ಬನ್ನೂರು ರಸ್ತೆಯಲ್ಲಿ ಇದೆ ಎಂದರೆ ಸರಿ. ಸದರಿ ಸ್ಥಳವು ಜನಸಂದಣಿ ಇರುವ ಸ್ಥಳ ಎಂದರೆ ಸಾಕ್ಷಿಯು, ಕೆಲವು ಸಮಯದಲ್ಲಿ ಜನಸಂದಣಿ ಇರುತ್ತದೆ, ಕೆಲವು ಸಮಯದಲ್ಲಿ ಜನಸಂದಣಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 4 ಮತ್ತು 6 ನೇ ಆರೋಪಿತರು ಶನಿಮಹಾತ್ಮ ದೇವಸ್ಥಾನದ ಬಳಿ ಇರುವ ಬಸ್ ನಿಲ್ದಾಣದ ಮುಂಭಾಗ ನಿಂತಿದ್ದರು. ನಮ್ಮ ಪೊಲೀಸ್ ಠಾಣೆಯು, ಸದರಿ ಶನಿಮಹಾತ್ಮ ದೇವಸ್ಥಾನಕ್ಕೆ ಸುಮಾರು ಅರ್ಧ ಕಿಮೀ ದೂರ ಇರಬಹುದು. ಸದರಿ 4 ಮತ್ತು 6 ನೇ ಆರೋಪಿತರನ್ನು ವಶಕ್ಕೆ ಪಡೆಯುವ ಸಮಯದಲ್ಲಿ ನಾನು ಫೋಟೋ ತೆಗೆದುಕೊಂಡಿಲ್ಲ, ಸ್ಥಳಿಯರನ್ನು ವಿಚಾರಣೆ ಮಾಡಿಲ್ಲ. ಶನಿಮಹಾತ್ಮ ದೇವಸ್ಥಾನದ ಬಳಿ 4 ಮತ್ತು 6 ನೇ ಆರೋಪಿತರನ್ನು ನಾನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮನೆಯಲ್ಲಿ ಇದ್ದ 4 ನೇ ಆರೋಪಿ ಮತ್ತು ವಯೋವೃದ್ಧರಾದ 6 ನೇ ಆರೋಪಿಯನ್ನು ಅವರ ಮನೆಯಿಂದ ಕರೆದುಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ.

15. 4 ಮತ್ತು 6 ನೇ ಆರೋಪಿತರ ಸ್ವಇಚ್ಛಾ ಹೇಳಿಕೆಯನ್ನು ನಾನು ಪಡೆದಿದ್ದೇನೆ. ಸದರಿ ಫ್ರಾಸಾ. 1 ರವರು ದೂರು ನೀಡಿದ ನಂತರ ಮರು ಹೇಳಿಕೆಯನ್ನು ನೀಡಲು ಪೊಲೀಸ್ ಠಾಣೆಗೆ ಸಂಜೆ 4.30 ರಿಂದ 5.00 ಗಂಟೆ ಸಮಯದಲ್ಲಿ ಬಂದಿದ್ದರು. ಅವರು ಸುಮಾರು 45 ನಿಮಿಷಗಳ ಕಾಲ ಪೊಲೀಸ್ ಠಾಣೆಯಲ್ಲಿ ಇದ್ದರು. ಆ ಸಮಯದಲ್ಲಿ ಫ್ರಾಸಾ. 1 ರವರು ಚಿಕಿತ್ಸೆ ಪಡೆದಿದ್ದರು, ಬ್ಯಾಂಡೇಜ್ ಹಾಕಿರುವುದನ್ನು ನಾನು ಗಮನಿಸಿಲ್ಲ.

16. ಫ್ರಾಸಾ. 1 ರವರನ್ನು, ಮಹಜರ್ ಮಾಡಲು ಯಾವಾಗ ಕರೆಸಿದ್ದೀರಿ ಎಂದರೆ ಸಾಕ್ಷಿಯು, ಮಧ್ಯಾಹ್ನ 1.45 ಕ್ಕೆ ನಾನು ಸ್ಥಳಕ್ಕೆ ಹೋಗಿದ್ದೆನು ಎಂದು ನುಡಿಯುತ್ತಾರೆ. ಪಂಚರನ್ನು ನಾನು ಬರಮಾಡಿಕೊಂಡಿದ್ದೆನು. ಘಟನಾ ಸ್ಥಳದಲ್ಲಿ ಘಟನೆಯ ಬಗ್ಗೆ ತಿಳಿಸಿದ ನಂತರ ಪಂಚರಿಗೆ ನಾನು ನೋಟಿಸು ನೀಡಿದ್ದೆನು. ಸದರಿ ಕೃತ್ಯ ನಡೆದ ಸ್ಥಳದ ಮುಂಭಾಗದ ಮನೆಯು, ಫ್ರಾಸಾ.1 ರವರಿಗೆ ಸೇರಿದೆ ಎಂದು ದಾಖಲಾತಿಗಳಲ್ಲಿ ಇದೆ, ನಾನು ವಿಚಾರಿಸಿಲ್ಲ. ತನಿಖೆಗೆ ಅವಶ್ಯಕತೆ ಇಲ್ಲದಿದ್ದುರಿಂದ , ಸದರಿ ಮನೆಯಲ್ಲಿ ಯಾರೆಲ್ಲ ವಾಸವಾಗಿದ್ದರು ಎಂದು ನಾನು ವಿಚಾರಿಸಿಲ್ಲ. ಸದರಿ ಘಟನಾ ಸ್ಥಳದ ಪಕ್ಕದಲ್ಲಿ ಆರೋಪಿತರ ಮನೆ ಇರುತ್ತದೆ, ಸದರಿ

ಮನೆಯಲ್ಲಿ 6 ನೇ ಆರೋಪಿ-ಪುಟ್ಟೀರಮ್ಮ ಇರುತ್ತಾರೆ, 1, 2, 4 ಮತ್ತು 7 ನೇ ಆರೋಪಿತರು, ಸದರಿ ಮನೆಗೆ ಬಂದು ಹೋಗುತ್ತಿದ್ದರು. ಸದರಿ ಘಟನಾ ಸ್ಥಳದ ಮುಂಭಾಗದಲ್ಲಿ ಇರುವ ಮನೆಯು ಅರ್.ಸಿ.ಸಿ ಮನೆಯಾಗಿರುತ್ತದೆ. 6 ನೇ ಆರೋಪಿಯ ಮನೆಯ ಮುಂಭಾಗದಲ್ಲಿ, ಅಂದರೆ ಸದರಿ ಮನೆಯ ಪೂರ್ವ ಭಾಗದಲ್ಲಿ, ಸದರಿ ಘಟನಾ ಸ್ಥಳದ ಮುಂಭಾಗದಲ್ಲಿ ಇರುವ ಆರ್.ಸಿ.ಸಿ ಮನೆಯ ಅಂತಸ್ತಿಗೆ ಹೋಗುವ ಮೆಟ್ಟಿಲುಗಳು ಇರುತ್ತವೆ. ಸದರಿ ಆರ್ ಸಿ ಸಿ ಮನೆಯ ಅಂತಸ್ತಿನಲ್ಲಿ 3 ಅಡಿ ಅಗಲದ ಪೊರ್ಟಿಕೋ ಇರುತ್ತದೆ. ಸದರಿ ಆರ್ ಸಿ ಸಿ ನೆಲ ಅಂತಸ್ತು 14 ಅಡಿ ಎತ್ತರ ಇರುತ್ತದೆ. ಸದರಿ ಆರ್.ಸಿ.ಸಿ ಮನೆಯ ಮುಂಭಾಗ ಖಾಲಿ ಜಾಗ ಇರುತ್ತದೆ. ಸದರಿ 6 ನೇ ಆರೋಪಿಯ ಮನೆ ಹಾಗೂ ಆರ್ ಸಿ ಸಿ ಮನೆಯ ಮುಖ್ಯದ್ವಾರಗಳು ದಕ್ಷಿಣ ಬಾಗಿಲಾಗಿರುತ್ತವೆ. ಸದರಿ ಆರ್.ಸಿ.ಸಿ ಮನೆ ಯ ಮೇಲಿಂದ ಕಲ್ಲು ಬಿದ್ದ ಬಗ್ಗೆ, ನೆಲದಲ್ಲಿ ಗುರುತು ಆಗಿತ್ತು. ಸಾಕ್ಷಿಯು ಮುಂದುವರೆದು ಎರಡು ಅಂಗೈ ಅಗಲದಷ್ಟು 5 ಇಂಚು ಹೊಂಡವಾಗಿತ್ತು ಎಂದು ನುಡಿಯುತ್ತಾರೆ. ಸದರಿ ಆರ್.ಸಿ.ಸಿ ಮನೆಯಿಂದ ಸದರಿ ಗುರುತಾಗಿದ್ದ ಸ್ಥಳಕ್ಕೆ ಸುಮಾರು 6 ಅಡಿ ದೂರ ಇದ್ದಿರುತ್ತದೆ.

17. ನಿಪಿ.3 ರಿಂದ 10 ಫೋಟೋಗಳನ್ನು ನಮ್ಮ ಸಿಬ್ಬಂದಿ ಕೃಷ್ಣ ಚೌಹಾನ್ ರವರು ತೆಗೆದಿರುತ್ತಾರೆ. ನಿಪಿ.7 ರಿಂದ 10 ಫೋಟೋದಲ್ಲಿ ಫ್ರಾಸಾ.1 ರವರಿಗೆ ಬ್ಯಾಂಡೇಜ್ ಆಗಿರುವುದು ಅಥವಾ ಚಿಕಿತ್ಸೆ ಪಡೆದ ಬಗ್ಗೆ ಕಾಣಿಸುವುದಿಲ್ಲ ಎಂದರೆ ಸಾಕ್ಷಿಯು ಫ್ರಾಸಾ.1 ರವರಿಗೆ ಬ್ಯಾಂಡೇಜ್ ಆಗಿರುವುದು ಕಾಣಿಸುತ್ತಿಲ್ಲ ಎಂದು ನುಡಿಯುತ್ತಾರೆ.

18. ದಿಃ 06.10.2020 ರಂದು ತೆಗೆಯಲಾದ ನಿಪಿ.12 ರಿಂದ 17 ಫೋಟೋಗಳಲ್ಲಿ ಫ್ರಾಸಾ. 1 ರವರ ಕೈಗಳಿಗೆ ಬ್ಯಾಂಡೇಜ್ ಹಾಕಲಾಗಿದೆ ಎಂದರೆ ಸಾಕ್ಷಿಯು ಸದರಿ ಬ್ಯಾಂಡೇಜನ್ನು ತಾನು ಹಾಕಿಸಿಲ್ಲ ಎಂದು ನುಡಿಯುತ್ತಾರೆ. ಘಟನಾ ದಿನದಿಂದ ದಿ ಃ 06.10.2020 ರ ತನಕ ಫ್ರಾಸಾ. 1 ರವರು ಚಿಕಿತ್ಸೆ ಪಡೆದ ಬಗ್ಗೆ ವೈದ್ಯಕೀಯ ದಾಖಲಾತಿಯನ್ನು ಪಡೆದಿಲ್ಲ. ಸದರಿ ಫ್ರಾಸಾ.1 ರವರು ದಿಃ 06.10.2020 ರಂದು ಯಾವ ಕಾರಣಕ್ಕೆ ಬ್ಯಾಂಡೇಜ್ ಹಾಕಿಕೊಂಡಿದ್ದಾರೆ ಎಂದು ನಾನು ವಿಚಾರಣೆ ಮಾಡಿಲ್ಲ. ಫ್ರಾಸಾ.1 ರವರ ಮಾತು ಕೇಳಿಕೊಂಡು ನಾಟಕವಾಡಿ, ಫ್ರಾಸಾ. 1 ರವರಿಗೆ ಬ್ಯಾಂಡೇಜ್ ಹಾಕಿಸಿಕೊಂಡು ನಿಪಿ.12 ರಿಂದ 17 ಫೋಟೋಗಳನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ.

19. ಮರೀಗೌಡ ಬಡಾವಾಣೆಯ ವಾಟರ್ ಟ್ಯಾಂಕ್ ನಿಂದ ಸದರಿ ಫ್ರಾಸಾ.1 ರವರ ಆರ್ ಸಿ ಸಿ ಮನೆಗೆ ಸುಮಾರು 300 ರಿಂದ 350 ಮೀಟರ್ ದೂರ ಇದೆ. ಸದರಿ ಫ್ರಾಸಾ. 1 ರವರ ಮನೆಯ ರಸ್ತೆಯ ಬದಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ ಎಂದರೆ ಸರಿ. ಫ್ರಾಸಾ.1

ರವರ ಮನೆ ಇರುವ ರಸ್ತೆಯ ಎರಡೂ ಬದಿಗಳಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ. ಸದರಿ ವಾಸದ ಮನೆಗಳಲ್ಲಿ ಸಿಸಿಟಿವಿ ವ್ಯವಸ್ಥೆ ಇದೆ ಎಂದರೆ ಸಾಕ್ಷಿಯು, ನಾನು ಫ್ರಾಸಾ.1 ರವರ ಮನೆಯ ಬಳಿ ಹೋದ ಸಮಯದಲ್ಲಿ ಸಿಸಿಟಿವಿ ವ್ಯವಸ್ಥೆಯನ್ನು ನಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ಸದರಿ ಫ್ರಾಸಾ.1 ರವರ ಮನೆಯ ಬಳಿ ದಾಳಿಂಬೆ ಗಿಡವು, ಸದರಿ ಮನೆಯಿಂದ ಸುಮಾರು 7 ಅಡಿಗಳ ದೂರದಲ್ಲಿದೆ. ಸದರಿ ಕಲ್ಲು ಬಿದ್ದಿದ್ದ ಸ್ಥಳವು, ದಾಳಿಂಬೆ ಗಿಡದಿಂದ 7 ಅಡಿ ದೂರದಲ್ಲಿ ಇರುತ್ತದೆ.

20.ಮುಮಾ.6 ದಿಂಡುಗಲ್ಲು ಎಷ್ಟು ಕೆ.ಜಿ. ತೂಕ ಇದೆ ಎಂದು ನಾನು ತೂಕ ಹಾಕಿಲ್ಲ. ಸದರಿ ಮುಮಾ.6 ಸಮತಟ್ಟಾಗಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕಲ್ಲಿನಲ್ಲಿ ಅಲ್ಲಲ್ಲಿ ನಾಲ್ಕೂ ಮೂಲೆಯಲ್ಲಿ ರಕ್ತವಾಗಿತ್ತು. ಸದರಿ ಕಲ್ಲಿನಲ್ಲಿ ಮಣ್ಣು ಯಾವ ಭಾಗದಲ್ಲಿ ಅಂಟಿತ್ತು ಎಂದರೆ ಸಾಕ್ಷಿಯು, ಸದರಿ ಕಲ್ಲಿನ ಕೆಳಭಾಗದಲ್ಲಿ ಮಣ್ಣು ಅಂಟಿತ್ತು ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋದಾಗ, ಸದರಿ ದಿಂಡುಗಲ್ಲು ಗುಂಡಿಯ ಪಕ್ಕದಲ್ಲಿ ಇತ್ತು. ದಾಳಿಂಬೆ ಗಿಡದಿ ಬಳಿ ಮುಮಾ.4 ಮತ್ತು 5 ಕುಡಗೋಲುಗಳು ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಕುಡಗೋಲು ಬೆಳೆದಿದ್ದ ದಾಳಿಂಬೆ ಗಿಡದ ಅಡಿಯಲ್ಲಿ ಇತ್ತು. ಸದರಿ ಕುಡಗೋಲುಗಳು ದೊಣ್ಣೆಗಳು ಇದ್ದ ಸ್ಥಳದಿಂದ ಸುಮಾರು 27 ಅಡಿ ದೂರದಲ್ಲಿದ್ದವು. ನಾನು ಫ್ರಾಸಾ. 1 ರವರ ಸಮಕ್ಷಮದಲ್ಲಿ ನಾನು ಯಾವುದೇ ಪಂಚನಾಮೆ ಮಾಡಿಕೊಂಡಿಲ್ಲ ಹಾಗೂ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

21. ದಿಂಡುಗಲ್ಲು ಬಿದ್ದ ಗುಳಿಯಲ್ಲಿ ಹಾಗೂ ಅದರ ಅಕ್ಕ ಪಕ್ಕ ಅಲ್ಲಲ್ಲಿ ಮಣ್ಣಿನಲ್ಲಿ ರಕ್ತದ ಕಲೆ ಇತ್ತು. ಸದರಿ ಸ್ಥಳದಲ್ಲಿ ಹುಲ್ಲು ಸಹ ಬೆಳೆದಿತ್ತು. ನಿಪಿ.6 ಮತ್ತು 7 ನ್ನು ಸಾಕ್ಷಿಗೆ ತೋರಿಸಿ ಸದರಿ ಕಲ್ಲು ಬಿದ್ದ ಸ್ಥಳದಲ್ಲಿ ಹುಲ್ಲು ಬೆಳೆದಿದ್ದು, ಮಣ್ಣು ಹಾಗೂ ರಕ್ತ ಬಿದ್ದಿರುವುದು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನಿಪಿ.10 ರಲ್ಲಿ ತೋರಿಸುವಂತೆ ಇರುವ ದೊಣ್ಣೆ ಹಾಜರು ಪಡಿಸುವ ಸ್ಥಳವು ಸದರಿ ಆರ್.ಸಿ.ಸಿ ಮನೆಯ ಮೆಟ್ಟಿಲುಗಳಿಂದ ಸುಮಾರು 8 ಅಡಿ ದೂರದಲ್ಲಿದೆ. ಕುಡಗೋಲು, ದೊಣ್ಣೆ ಹಾಗೂ ದಿಂಡುಗಲ್ಲನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸದರಿ ಮನೆಯ ಅಕ್ಕ ಪಕ್ಕದಲ್ಲಿರುವವರನ್ನು ವಿಚಾರಣೆ ಮಾಡಿಲ್ಲ. ನಾನು ನಿಪಿ.2 ನ್ನು ಘಟನಾ ಸ್ಥಳದಲ್ಲಿ ಮಾಡಿಲ್ಲ ಎಂದರೆ ಸರಿಯಲ್ಲ. ಫ್ರಾಸಾ. 1 ಮತ್ತು ನಾನು ಶರೀಕಾಗಿ ನಿಪಿ.2 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲಿಲ ಸಾದಾ ಮಣ್ಣು ಮತ್ತು ರಕ್ತ ಇದ್ದ ಮಣ್ಣನ್ನು ವಶಪಡಿಸಿಕೊಂಡಿದ್ದೆವು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ನಿಪಿ.3 ರಿಂದ 10 ಫೋಟೋಗಳನ್ನು ತೆಗೆದುಕೊಂಡಿಲ್ಲ ಎಂದರೆ

ಸರಿಯಲ್ಲ. ಪಂಚರ ಸಮಕ್ಷಮ ಯಾವುದೇ ಮಹಜರನ್ನು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

22. 2, 4 ಮತ್ತು 5 ನೇ ಆರೋಪಿತರು ಎಲ್ಲಿ ವಾಸವಾಗಿದ್ದರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿಯು ಮುಂದುವರೆದು ವಶಕ್ಕೆ ಪಡೆದ ವರದಿ ಪಡೆದ ನಂತರ ಸದರಿಯವರು ಮಂಡ್ಯದ ಸುಭಾಷ ನಗರ ಮತ್ತು ಕಲ್ಲಹಳ್ಳಿಯಲ್ಲಿ ವಾಸವಾಗಿದ್ದಾರೆ ಎಂದು ಗೊತ್ತಾಯಿತು. 2 ಮತ್ತು 7 ನೇ ಆರೋಪಿತರನ್ನು ಅವರ ಮನೆಯಿಂದ ಮತ್ತು 5 ನೇ ಆರೋಪಿಯನ್ನು, ಅವರ ಊರಿನಿಂದ ಸಿಬ್ಬಂದಿಗಳು ವಶಕ್ಕೆ ಪಡೆದಿದ್ದರು ಎಂದರೆ ಸಾಕ್ಷಿಯು ಸದರಿ ಆರೋಪಿತರನ್ನು ನನ್ನ ಮುಂದೆ ಸಿಬ್ಬಂದಿಗಳು ಹಾಜರಿಸಿದ್ದರು ಎಂದು ನುಡಿಯುತ್ತಾರೆ. 2, 5 ಮತ್ತು 7 ನೇ ಆರೋಪಿತರು ನನ್ನ ಸಮಕ್ಷಮ ಯಾವುದೇ ಸ್ವಇಚ್ಚಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

23. ಸದರಿ 2 ನೇ ಆರೋಪಿಯನ್ನು ವಶಕ್ಕೆ ಪಡೆದ ಸಮಯದಲ್ಲಿ, ಅವರನ್ನು ನನ್ನ ಮುಂದೆ ಹಾಜರು ಪಡಿಸಿದ ಸಮಯದಲ್ಲಿ ಅದೇ ಬಟ್ಟೆಯನ್ನು 2 ನೇ ಆರೋಪಿ ಧರಿಸಿದ್ದರೆಂದು ತೋರಿಸಲು 2 ನೇ ಆರೋಪಿಯನ್ನು ವಶಕ್ಕೆ ಪಡೆದ ಸಮಯದಲ್ಲಿ ಫೋಟೋ ತೆಗೆದುಕೊಂಡಿಲ್ಲ. ಸದರಿ 2 ನೇ ಆರೋಪಿಗೆ ನಮ್ಮ ಪೊಲೀಸ್ ಠಾಣೆಯಲ್ಲಿ 3 ದಿನಗಳ ಹಿಂದೆ ತಂದು ಇಟ್ಟಿದ್ದ ಪ್ಯಾಂಟ್ ನ್ನು ಬದಲಿ ಪ್ಯಾಂಟ್ ಆಗಿ ನೀಡಿದ್ದೆವು.

24. ಸದರಿ 2 ನೇ ಆರೋಪಿಯ ಪ್ಯಾಂಟನ್ನು ಅಮಾನತ್ತು ಪಡಿಸಿಕೊಳ್ಳಲು ಮಹಜರಿಗಾಗಿ ಪಂಚರನ್ನು ನಾನೇ ಕರೆತಂದಿದ್ದೆನು. ನಿಪಿ.23, 24 ಮತ್ತು ನಿಪಿ.26 ರಲ್ಲಿ ನಾವು ಅಮಾನತ್ತು ಪಡಿಸಿಕೊಂಡ ಪ್ಯಾಂಟು ಆತ ಹಾಕಿಕೊಂಡಿದ್ದ ರೀತಿಯಲ್ಲಿ ಇರುವುದಿಲ್ಲ ಎಂದರೆ ಸರಿ. ನಿಪಿ.23, 24, 26 ಫೋಟೋಗಳಲ್ಲಿ ಆರೋಪಿ ತೋರಿಸುವ ಪ್ಯಾಂಟನ್ನು ನಾವು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪ್ಯಾಂಟನ್ನು 2 ನೇ ಆರೋಪಿಯಿಂದ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

25. 1 ನೇ ಆರೋಪಿಯ ಸ್ವಂತ ಊರು ಇಕ್ಕೆರೆ ಗ್ರಾಮವಾಗಿರುತ್ತದೆ. 1 ನೇ ಆರೋಪಿಯನ್ನು ದಿಃ 01.10.2020 ರಂದು ನಮ್ಮ ಎಎಸ್ಐ ಲಿಂಗರಾಜು ರವರು ಇಂತಹದೇ ಸ್ಥಳದಲ್ಲಿ ವಶಕ್ಕೆ ಪಡೆದಿದ್ದರು ಎಂದು ತೋರಿಸಲು ಫೋಟೋ ತೆಗೆದುಕೊಂಡಿಲ್ಲ. 1 ನೇ ಆರೋಪಿಯು ನನ್ನ ಮುಂದೆ ಯಾವುದೇ ಸ್ವಇಚ್ಚಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.

26. ಘಟನಾ ಕಾಲದಿಂದ 1 ನೇ ಆರೋಪಿಯು ದಸ್ತಗಿರಿ ಆಗುವ ತನಕ ಸದರಿ ಆರೋಪಿಯು, ಒಂದೇ ಬಟ್ಟೆಯನ್ನು ಧರಿಸಿದ್ದನು. ನಿಪಿ.27 ಮತ್ತು 28 ಫೋಟೋಗಳಲ್ಲಿ

1 ನೇ ಆರೋಪಿಯು ತೊಟ್ಟಿರುವ ಬಟ್ಟೆಗಳು ಯಾವುವೆಂದರೆ ಸಾಕ್ಷಿಯು ನಿಪಿ.28 ರಲ್ಲಿ 1 ನೇ ಆರೋಪಿಯು ಧರಿಸಿಕೊಂಡಿರುವ ಪ್ಯಾಂಟು,ಆತನನ್ನು ದಸ್ತಗಿರಿ ಮಾಡಿದಾಗ ಆತ ಧರಿಸಿಕೊಂಡಿದ್ದಾಗಿರುತ್ತದೆ, ನಿಪಿ.27 ರಲ್ಲಿ 1 ನೇ ಆರೋಪಿ ಧರಿಸಿಕೊಂಡಿರುವ ಪ್ಯಾಂಟು, ಸದರಿ ಆತ ಮೊದಲು ಧರಿಸಿದ ಪ್ಯಾಂಟನ್ನು ತೆಗೆದ ನಂತರ ಹಾಕಿಕೊಂಡು ಪ್ಯಾಂಟು ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ 1 ನೇ ಆರೋಪಿಯು ಪ್ಯಾಂಟು ಬದಲಾಯಿಸುವ ಸಮಯದಲ್ಲಿ ಯಾವುದೇ ಫೋಟೋ ತೆಗೆದುಕೊಂಡಿಲ್ಲ. 1 ನೇ ಆರೋಪಿಯಿಂದ ಮುಮಾ.14 ಪ್ಯಾಂಟನ್ನು ಪಡೆದುಕೊಂಡಿಲ್ಲ, ಅದನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದರಲ್ಲಿ ರಕ್ತದ ಕಲೆಗಳು ಇರಲಿಲ್ಲ ಎಂದರೆ ಸರಿಯಲ್ಲ. ಪಂಚರ ಸಮಕ್ಷಮದಲ್ಲಿ 1 ನೇ ಆರೋಪಿಯಿಂದ ಯಾವುದೇ ಪ್ಯಾಂಟನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

*1, 4 ರಿಂದ 7 ನೇ ಆರೋಪಿತರ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನದ ಕಲಾಪದಲ್ಲಿ ಮಾಡುತ್ತೇನೆ ಎಂದು ಸಮಯಾವಾಕಾಶ ಕೋರುತ್ತಾರೆ, ಸದರಿ ಆರೋಪಿತರ ಪರ ವಕೀಲರ ಕೋರಿಕೆಯನ್ನು ಮನ್ನಿಸಿ ಮಧ್ಯಾಹ್ನ 2.45 ಕ್ಕೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಗಿದೆ.*

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 39/2021

ದಿನಾಂಕ ಃ 11.12.2025 ರಂದು ಸಾಕ್ಷಿಗೆ ಮಧ್ಯಾಹ್ನ 3.20 ಗಂಟೆಗೆ ಪ್ರಮಾಣ ವಚನ ಬೋಧಿಸಲಾಗಿದೆ.

ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಬಿ ಆರ್ ವಿ ವಕೀಲರಿಂದಃ

27. ನಿಪಿ.27 ರಿಂದ 30 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ದಸ್ತಗಿರಿ ಮಾಡಿದ ಆರೋಪಿತರು ಘಟನಾ ಸ್ಥಳವನು ತೋರಿಸುತ್ತೇನೆ ಎಂದು ನಮ್ಮನ್ನು ಕರೆದುಕೊಂಡು ಹೋದರು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ನೇ ಆರೋಪಿಯು ಸದರಿ ಆರ್ ಸಿ ಸಿ ಮನೆಯ ಅಂತಸ್ತಿನ ಮೇಲೆ ಕಲ್ಲು ಎತ್ತಿ ಹಾಕಿದ ಸ್ಥಳ ಎಂದು ಸ್ಥಳವನ್ನು ತೋರಿಸಿದ್ದನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 4 ಮತ್ತು 7 ನೇ ಆರೋಪಿತರು ದಾಳಿಂಬೆ ಗಿಡದ ಬುಡದ ಹತ್ತಿರ ಸ್ಥಳವನ್ನು ತೋರಿಸಿ ಸರಿದ ಸ್ಥಳದಲ್ಲಿ ಹಳ್ಳ ಮಾಡಿ ಮಚ್ಚು ಮತ್ತು ಎರಡು ಕುಡಗೋಲನ್ನು ಇಟ್ಟಿದ್ದೆವು ಎಂದು ತೋರಿಸಿದ್ದನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು 3 ನೇ ಆರೋಪಿ ಸಿದಪ್ಪ ರವರು ಹಲ್ಲೆ ಮಾಡಿ ಬಿಸಾಡಿದ್ದ ದೊಣ್ಣೆಗಳನ್ನು ಸ್ಥಳ ಎಂದು ಸ್ಥಳವನ್ನು ತೋರಿಸಿದ್ದನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ.

28. ಫ್ರಾಸಾ. 2 ರವರು ಮಂಡ್ಯ ಆಸ್ಪತ್ರೆಯಲ್ಲಿ ಅಥವಾ ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಮಾಹಿತಿ ಇತ್ತು. ಮಂಡ್ಯ ಆಸ್ಪತ್ರೆಯಲ್ಲಿ ಫ್ರಾಸಾ. 2 ರವರು ಇದ್ದಾಗ ಯಾರು ಅವರ ಪರಿಸ್ಥಿತಿಯ ಬಗ್ಗೆ ಹಾಗೂ ಅವರು ಹೇಗಿದ್ದರು ಎನ್ನುವ ಬಗ್ಗೆ ಯಾರು ವಿಚಾರಣೆ ಮಾಡಿದರು ಎಂದರೆ ಸಾಕ್ಷಿಯು, ಮಂಡ್ಯ ಆಸ್ಪತ್ರೆಗೆ ಫ್ರಾಸಾ. 1 ರವರನ್ನು ಕರೆದಕೊಂಡು ಹೋದ ಕೂಡಲೇ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು ಎಂದು ನುಡಿಯುತ್ತಾರೆ. ಮಂಡ್ಯ ಆಸ್ಪತ್ರೆಯಿಂದ ಬೆಂಗಳೂರಿನ ಆಪ್ಷ ಆಸ್ಪತ್ರೆಗೆ ಫ್ರಾಸಾ. 2 ರವರನ್ನು ಹೆಚ್ಚಿನ ಚಿಕಿತ್ಸೆ ಗೆ ಕಳುಹಿಸಿದ್ದರು. ಪ್ರಥಮ ವರ್ತಮಾನ ವರದಿ ದಾಖಲಾದ ದಿನವೇ, ಬೆಂಗಳೂರಿನ ಆಪ್ಷ ಆಸ್ಪತ್ರೆಯವರು ಮೆಮೋ ನೀಡಿದ್ದರು. ತಕ್ಷಣ ಸದರಿ ಫ್ರಾಸಾ. 2 ರವರ ಸ್ಥಿತಿಗತಿಯನ್ನು ತಿಳಿಯಲು ಆಪ್ಷ ಆಸ್ಪತ್ರೆಗೆ ಭೇಟಿ ನೀಡಿಲ್ಲ. ಫ್ರಾಸಾ. 2 ರವರು ಸದರಿ ಆಪ್ಷ ಆಸ್ಪತ್ರೆಯಿಂದ ಬಿಡುಗಡೆಯಾಗುವ ತನಕ ಸಮಯದಲ್ಲಿ ಫ್ರಾಸಾ. 2 ರವರ ಹೇಳಿಕೆ ಯನ್ನು ಪಡೆಯಲಾಗಿದೆಯೇ ಎಂದದರೆ ಸಾಕ್ಷಿಯು ದಿಃ 06.10.2020 ರಂದು ನಾನು ಮತ್ತು ಸಿಬ್ಬಂದಿ ಕಾಳಯ್ಯ ರವರು ಸದರಿ ಆಸ್ಪತ್ರೆಗೆ ಭೇಟಿ ನೀಡಿರುತ್ತೇವೆ. ಸದರಿ ಆಸ್ಪತ್ರೆಯಲ್ಲಿ ನಾನು ಹೇಳಿದ್ದರ ಮೇರೆಗೆ ಕಾಳಯ್ಯ ರವರು ಫ್ರಾಸಾ.2 ರವರ ಸ್ಥಿತಿಯ ಬಗ್ಗೆ ಮಾಹಿತಿ ಕೋರಿ ವೈದ್ಯರಿಗೆ ಸೂಚನಾ

ಪತ್ರವನು ನೀಡಿದ್ದರು. ಅದೇ ದಿನ ವೈದ್ಯಾಧಿಕಾರಿಗಳು ಪ್ರಾಸಾ. 2 ರವರು ಹೇಳಿಕೆಯನ್ನು ನೀಡುವ ಸ್ತಿತಿಯಲ್ಲಿ ಇಲ್ಲವೆಂದು ವರದಿ ನೀಡಿದ್ದರು. ದಿಃ 06.10.2020 ರಂದು ಪ್ರಾಸಾ.2 ರವರನ್ನು ಹೇಳಿಕೆಯನ್ನು ಪಡೆಯಲು ಆಪ್ತ ಆಸ್ಪತ್ರೆಗೆ ಭೇಟಿ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.49 ವರದಿಯನ್ನು ನನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಪಡೆದಿರುತ್ತೇನೆ ಎಂದರೆ ಸರಿಯಲ್ಲ.

29. ಪ್ರಾಸಾ.2 ರವರ ಸ್ಥಿತಿಯ ಬಗ್ಗೆ ಕೋರಿಕೆ ಪತ್ರವನ್ನು ನೀಡುವ ತನಕ ಸದರಿ ಪ್ರಾಸಾ. 2 ರವರನ್ನು ನಾವು ಯಾರು ಭೇಟಿ ಮಾಡಿಲ್ಲ ಎಂದರೆ ಸರಿ. ಸದರಿ ಪ್ರಾಸಾ. 2 ರವರು ಹೇಳಿಕೆಯನು ನೀಡುವ ಸ್ಥಿತಿಯಲ್ಲಿ ಇಲ್ಲವೆಂಬ ಬಗ್ಗೆ ದಾಖಲಾತಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿಯು, ಸದರಿ ನಮ್ಮ ಮನವಿ ಪತ್ರದ ಮೇಲೆ ವೈದ್ಯಾಧಿಕಾರಿಯವರು ಪ್ರಾಸಾ. 2 ರವರ ಸ್ಥಿತಿಯ ಬಗ್ಗೆ ಬರೆದು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರಾಸಾ.3, 4, 5 ಮತ್ತು 9 ರವರಿಗೆ ನಾನು ನೋಟಿಸು ನೀಡಿಲ್ಲ ಹಾಗೂ ಅವರು ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ದಿಃ 06.10.2020 ರಂದು ಪ್ರಾಸಾ. 3 ಮತ್ತು 5 ರವರ ಸಮಕ್ಷಮದಲ್ಲಿ ಪ್ರಾಸಾ.2 ರವರ ಬಟ್ಟೆಗಳನ್ನು ವಶಪಡಿಸಿಕೊಂಡೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಪ್ರಾಸಾ.2 ಬಟ್ಟೆಗಳನ್ನು, ಪ್ರಾಸಾ.1 ರವರು ಬೆಂಗಳೂರಿನ ಆಪ್ತ ಆಸ್ಪತ್ರೆಯಿಂದ ತಂದಿದ್ದರು. ಪ್ರಾಸಾ.1 ರವರಿಗೆ ಪ್ರಾಸಾ. 2 ರವರ ಬಟ್ಟೆಗಳನ್ನು ಹಾಜರು ಮಾಡಲು ನಾನು ನೋಟಿಸು ನೀಡಿಲ್ಲ. ಪ್ರಾಸಾ.1 ಮತ್ತು 2 ರವರ ಬಟ್ಟೆಗಳನ್ನು ಪಂಚರ ಸಮಕ್ಷಮದಲ್ಲಿ ನಿಪಿ.11 ರಂತೆ ಮಹಜರ್ ಮಾಡಿ ವಶಕ್ಕೆ ಪಡೆದಿದ್ದೆನು ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.12 ರಿಂದ 17 ಫೋಟೋಗಳನ್ನು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

30. ಪ್ರಾಸಾ. 2 ರವರ ಮಾದರಿ ರಕ್ತವನ್ನು ಪಡೆಯದೇ ಇದ್ದರೂ ಸಹ ಅದನ್ನು ನಾನು ಪಡೆದಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಈ ಪ್ರಕರಣದ ಆರೋಪಿತರು ಯಾವುದೇ ರೀತಿಯ ಮಾರಣಾಂತಿಕ ಹಲ್ಲೆ ಮಾಡಿಲ್ಲವೆಂದು ಕಂಡು ಬಂದಿತ್ತು ಹಾಗೂ ಸುಳ್ಳು ದೂರಿಗೆ ಅನ್ವಯವಾಗುವಂತೆ ನಾನು ಸುಳ್ಳು ತನಿಖೆಯನ್ನು ಕೈಗೊಂಡಿದ್ದೆನು ಎಂದರೆ ಸರಿಯಲ್ಲ.

31. ಪ್ರಾಸಾ. 2 ರವರಿಗೂ, 4 ರಿಂದ 8 ನೇ ಆರೋಪಿತರ ನಡುವೆ ಇರುವ ಸಿವಿಲ್ ವ್ಯಾಜ್ಯದ ಬಗ್ಗೆ ನನಗೆ ಗೊತ್ತಿಲ್ಲ. 2003 ರಿಂದ ಒಟ್ಟು ಕುಟುಂಬದ ಆಸ್ತಿಯಲ್ಲಿ ಪ್ರಾಸಾ. 2 ರವರಿಗೂ ಹಾಗೂ ಅವರ ಅಕ್ಕ ತಂಗಿಯರಿಗೂ ಜಮೀನು ವಿವಾದ ನಡೆಯುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸಿವಿಲ್ ದಾವೆಗಳ ಬಗ್ಗೆ ದಾಖಲಾತಿಯನ್ನು ನಾನು ಪಡೆದುಕೊಂಡಿಲ್ಲ. 2003 ರಿಂದ ಈವರೆಗೂ ಪ್ರಾಸಾ.2 ರವರಿಗೂ

ಮತ್ತು 4 ರಿಂದ 8 ನೇ ಆರೋಪಿತರಿಗೂ ಒಟ್ಟು ಕುಟುಂಬದ ಆಸ್ತಿಯಲ್ಲಿ ಭಾಗಾಂಶದಲ್ಲಿ ವಿವಾದವಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಅದನ್ನು ಮರೆ ಮಾಚಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

32. ಫ್ರಾಸಾ.2 ರವರು ಮಿಕ್ಕೆರೆ ಗ್ರಾಮದ ವಾಸಿ ಎಂದರೆ ಸಾಕ್ಷಿಯು ಇರಬಹುದು ಎಂದು ಹೇಳುತ್ತಾರೆ. ದಿಃ 30.09.2020 ರಂದು ಮರೀಗೌಡ ಬಡಾವಣೆಯಲ್ಲಿ ಇದ್ದ ಮನೆಯನ್ನು ಫ್ರಾಸಾ. 2 ರವರು ರಿಪೇರಿ ಮಾಡಿಸುವ ಸಮಯದಲ್ಲಿ ಸದರಿ 4 ರಿಂದ 8 ನೇ ಆರೋಪಿತರು ಕೇಳಿದ್ದರು ಎಂದರೆ ಸಾಕ್ಷಿಯು, ಸದರಿ ವಿಚಾರದ ಹಿನ್ನೆಲೆಯಲ್ಲಿಯೇ ಗಲಾಟೆ ನಡೆದಿರುತ್ತದೆ ಎಂದು ನುಡಿಯುತ್ತಾರೆ. ಆ ದಿನ ಗಲಾಟೆಯಲ್ಲಿ, ಫ್ರಾಸಾ.1 ಮತ್ತು 2 ರವರು, 1 ನೇ ಆರೋಪಿಗೆ ಹಲ್ಲೆ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಗಲಾಟೆಯ ತಳ್ಳಾಟದಲ್ಲಿ ಫ್ರಾಸಾ. 2 ರವರು ಕಲ್ಲಿನ ಮೇಲೆ ಬಿದ್ದು ಪೆಟ್ಟು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸರಿಯಾಗಿ ತನಿಖೆಯನ್ನು ಮಾಡಿರಲಿಲ್ಲ, ಸುಳ್ಳು ತನಿಖೆಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ಫ್ರಾಸಾ.2 ರವರು ಸದರಿ ಒಟ್ಟು ಕುಟುಂಬದ ಆಸ್ತಿಯನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ಫ್ರಾಸಾ.1 ರವರು ನೀಡಿದ ಅನುಗಣುವಾಗಿ ನಾವು ಶರೀಕಾಗಿ ಸುಳ್ಳು ತನಿಖೆಯನ್ನು ನಾನು ಕೈಗೊಂಡಿದ್ದೆನು ಎಂದರೆ ಸರಿಯಲ್ಲ. ಹಾಜರು ಪಡಿಸಿರುವ ವೈದ್ಯಕೀಯ ದಾಖಲಾತಿಗಳನ್ನು, ನನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ** ಃ ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.